ಕರ್ನಾಟಕ ಸರ್ಕಾರ

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–03**

ಸಂಖ್ಯೆ:ಕಶಾಪ&ಮೌ.ನಿ.ಮಂ/ಪರೀಕ್ಷೆ/ಖಾ.ಅ.ನೋ/2023–24 ದಿನಾಂಕ:04/10/2023

**ಸು ತ್ತೋ ಲೆ**

**ವಿಷಯ: ಮಾರ್ಚ್ 2024 ರಲ್ಲಿ ನಡೆಸಲಾಗುವ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಖಾಸಗಿ ಅಭ್ಯರ್ಥಿಗಳಾಗಿ ನೊಂದಾಯಿಸಿಕೊಳ್ಳುವ ಕುರಿತು.**

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ ಇಡಿ.242.ಟಿಪಿಯು.81 ದಿನಾಂಕ:02–11–1981.
2. ಸರ್ಕಾರದ ಆದೇಶ ಸಂಖ್ಯೆ ಇಡಿ. 125.ಟಿಪಿಯು.90 ದಿನಾಂಕ:03–07–1992.
3. ಸರ್ಕಾರದ ಆದೇಶ ಸಂಖ್ಯೆ ಇಡಿ. 159.ಟಿಪಿಯು.96 ದಿನಾಂಕ:20–09–1996.
4. ಸರ್ಕಾರದ ಆದೇಶ ಸಂಖ್ಯೆ ಇಡಿ. 09.ಟಿಪಿಯು.2005 ದಿನಾಂಕ:31–05–2005.
5. ಸರ್ಕಾರದ ಆದೇಶ ಸಂಖ್ಯೆ ಇಡಿ. 195.ಡಿಜಿಡಿ.2017 ದಿನಾಂಕ:20–03–2018.
6. ಸರ್ಕಾರದ ಆದೇಶ ಸಂಖ್ಯೆ ಇಪಿ. 203 ಎಸ್‌ಎಲ್‌ಬಿ 2023 ದಿನಾಂಕ: 21–09–2023.

------

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿಯು ನಡೆಸುತ್ತಿರುವ ಮಾರ್ಚ್ 2024 ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ–1ಕ್ಕೆ ಉಲ್ಲೇಖಿತ ಸರ್ಕಾರದ ಆದೇಶಗಳನ್ವಯ ಪಿಯುಸಿ ಶಿಕ್ಷಣ ಬೋಧಿಸುವ ರಾಜ್ಯದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಮಾತ್ರ ಖಾಸಗಿ ಅಭ್ಯರ್ಥಿಯಾಗಿ ನೊಂದಾಯಿಸಿಕೊಂಡು ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಿಕೊಡಲಾಗಿದೆ. ಅದರಂತೆ ಮಾರ್ಚ್ 2024 ರಲ್ಲಿ ನಡೆಸಲಾಗುವ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಅರ್ಹ ಅಭ್ಯರ್ಥಿಗಳು ಖಾಸಗಿ ಅಭ್ಯರ್ಥಿಗಳಾಗಿ ನೊಂದಾಯಿಸಿಕೊಳ್ಳಲು ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಿದ್ದು, ದಿನಾಂಕ: 04–10–2023 ರಿಂದ ಖಾಸಗಿ ಅಭ್ಯರ್ಥಿಗಳಾಗಿ ನೊಂದಾಯಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

**1. ಖಾಸಗಿ ಅಭ್ಯರ್ಥಿಗಳಾಗಿ ನೊಂದಾಯಿಸಿಕೊಳ್ಳಲು ಕಡ್ಡಾಯವಾಗಿ ಇರಬೇಕಾದ ಅರ್ಹತೆಗಳು ಹಾಗೂ ಸೂಚನೆಗಳು:**

1. ದಿನಾಂಕ: 31–03–2024 ಕ್ಕೆ 17 ವರ್ಷಗಳು ತುಂಬಿರಬೇಕು. (31–03–2007 ರಂದು ಅಥವಾ ಅದಕ್ಕಿಂತ ಹಿಂದೆ ಜನಿಸಿರಬೇಕು.
2. ಕರ್ನಾಟಕದಲ್ಲಿ ಎಸ್.ಎಸ್.ಎಲ್.ಸಿ/ಸಿ.ಬಿ.ಎಸ್.ಇ/ಐ.ಸಿ.ಎಸ್.ಇ/ಎನ್.ಐ.ಓ.ಎಸ್.ಗಳಲ್ಲಿ ವ್ಯಾಸಂಗ ಮಾಡಿ 2023 ರ ಜೂನ್ ಅಥವಾ ಅದಕ್ಕೂ ಹಿಂದಿನ ವರ್ಷಗಳಲ್ಲಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
3. ಇತರೆ ರಾಜ್ಯಗಳ ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ/10ನೇ ತರಗತಿ ಪರೀಕ್ಷೆ ತೆಗೆದುಕೊಂಡು, ಪರೀಕ್ಷೆಯಲ್ಲಿ ಕನ್ನಡವನ್ನು ಒಂದು ಭಾಷೆಯನ್ನಾಗಿ ಅಥವಾ ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡಿ ತೇರ್ಗಡೆ ಹೊಂದಿರಬೇಕು ಹಾಗೂ 2023 ರ ಜೂನ್ ಅಥವಾ ಅದಕ್ಕೂ ಹಿಂದಿನ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಬೇಕು.

4. ಶಾಲಾ ಶಿಕ್ಷಣ ಇಲಾಖೆಯ (ಪದವಿ ಪೂರ್ವ) ದಾಖಲಾತಿ ಮಾರ್ಗಸೂಚಿ ಪಟ್ಟಿಯಲ್ಲಿರುವ ಸೆಕೆಂಡರಿ ಎಜುಕೇಷನ್ ಬೋರ್ಡ್‌ಗಳಿಂದ 10ನೇ ತರಗತಿಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಮಾತ್ರ ದ್ವಿತೀಯ ಪಿಯುಸಿಗೆ ಖಾಸಗಿ ಅಭ್ಯರ್ಥಿಯಾಗಿ ನೊಂದಾಯಿಸಿಕೊಳ್ಳಲು ಅರ್ಹರಾಗಿರುತ್ತಾರೆ.
5. ಪ್ರಥಮ ಪಿಯುಸಿ ಅನುತ್ತೀರ್ಣರಾದವರು, ಪರೀಕ್ಷೆಗೆ ಹಾಜರಾಗದವರು, ವ್ಯಾಸಂಗವನ್ನು ಮುಂದುವರಿಸದವರು ಖಾಸಗಿ ಅಭ್ಯರ್ಥಿಯಾಗಿ ತಮ್ಮ ಹೆಸರನ್ನು ನೊಂದಾಯಿಸಿ ಕೊಳ್ಳಬಹುದಾಗಿದೆ. ಹೊರ ರಾಜ್ಯದಲ್ಲಿ 10ನೇ ತರಗತಿ ಉತ್ತೀರ್ಣರಾಗಿ ಕರ್ನಾಟಕದಲ್ಲಿ ಪ್ರಥಮ ಪಿಯುಸಿ ದಾಖಾಲಾತಿ ಪಡೆದು ವ್ಯಾಸಂಗ ಮುಂದುವರೆಸದವರು (discontinued) ಖಾಸಗಿ ಅಭ್ಯರ್ಥಿಗಳಾಗಿ ನೊಂದಾಯಿಸಲು ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಇವರು ನೀಡುವ ಪ್ರಥಮ ಪಿಯುಸಿ ಸ್ಯಾಟ್ಸ್ ನಂಬರ್ ಕಡ್ಡಾಯವಾಗಿ ನೀಡುವುದು.
6. ಕರ್ನಾಟಕ ರಾಜ್ಯದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣಗೊಂಡು ಐ.ಟಿ.ಐ, ಜೆಓಸಿ, ಡಿಪ್ಲೊಮೊ ಇತ್ಯಾದಿ ತರಗತಿಗಳಿಗೆ ದಾಖಲಾಗಿ ಅನುತ್ತೀರ್ಣಗೊಂಡು ಅಲ್ಲಿ ವ್ಯಾಸಂಗ ಮುಂದುವರೆಸದವರು ಖಾಸಗಿ ಅಭ್ಯರ್ಥಿಯಾಗಿ ತಮ್ಮ ಹೆಸರನ್ನು ನೊಂದಾಯಿಸಲು ಅರ್ಹರಾಗಿರುತ್ತಾರೆ. ದ್ವಿತೀಯ ಪಿಯಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಅನುತ್ತೀರ್ಣರಾಗಿರುವ ಸಂಯೋಜನೆ ಹೊರತುಪಡಿಸಿ, ಬೇರೆ ಅಂದರೆ ಕಲಾ ಅಥವಾ ವಾಣಿಜ್ಯ ಸಂಯೋಜನೆಯಲ್ಲಿ ಖಾಸಗಿ ಅಭ್ಯರ್ಥಿಯಾಗಿ ಹೆಸರನ್ನು ನೊಂದಾಯಿಸಿಕೊಳ್ಳಬಹುದಾಗಿದೆ. ಹಾಗೂ ಐಟಿಐ, ಜೆಓಸಿ, ಡಿಪ್ಲೊಮೊ ಇತ್ಯಾದಿ ತರಗತಿಗಳಲ್ಲಿ ಉತ್ತೀರ್ಣರಾದವರೂ ಸಹ ಖಾಸಗಿ ಅಭ್ಯರ್ಥಿಯಾಗಿ ನೊಂದಾಯಿಸಿಕೊಳ್ಳಬಹುದು.
7. ಅಂಧ ವಿದ್ಯಾರ್ಥಿಗಳಿಗೆ ವಾಸಸ್ಥಳ/ಉದ್ಯೋಗ ಸ್ಥಳ/ಅಂಧ ಶಾಲೆ ಇರುವ ಸ್ಥಳದ ಸಮೀಪದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಖಾಸಗಿ ಅಭ್ಯರ್ಥಿಯಾಗಿ ನೊಂದಾಯಿಸಲು ಅವಕಾಶ ನೀಡಲಾಗಿದೆ.
8. ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅಭ್ಯರ್ಥಿಯು ತನ್ನ ವಾಸಸ್ಥಾನಕ್ಕೆ ಹತ್ತಿರವಾಗಿರುವ ಅಥವಾ ಉದ್ಯೋಗ ಮಾಡುವ ಸ್ಥಳಕ್ಕೆ ಸಮೀಪದಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಮಾತ್ರ ಹೆಸರನ್ನು ನೊಂದಾಯಿಸಿಕೊಳ್ಳಬಹುದು.
9. ವಾಸಸ್ಥಳದ ಖಾತರಿಗಾಗಿ ವಾಸಸ್ಥಳದ ವಿಳಾಸದ ವಿವರವಿರುವ ಈ ಕೆಳಗಿನ ಯಾವುದಾದರೂ ಒಂದು ದೃಢೀಕರಿಸಿದ ದಾಖಲೆಯನ್ನು ಸಲ್ಲಿಸುವುದು.
    - ಮತದಾರರ ಗುರುತು ಚೀಟಿ
    - ಪಡಿತರ ಚೀಟಿ
    - ಬ್ಯಾಂಕ್ ಖಾತೆ ಪಾಸ್ ಬುಕ್
    - ಡ್ರೈವಿಂಗ್ ಲೈಸೆನ್ಸ್

10. ಖಾಸಗಿ ಅಭ್ಯರ್ಥಿಗಳು ಆಧಾರ್ ಕಾರ್ಡ್‌ನ ದೃಢೀಕೃತ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಲು ಸೂಚಿಸಿದೆ.
11. ದ್ವಿಪ್ರತಿ ವರ್ಗಾವಣೆ ಪತ್ರದ ಆಧಾರದ ಮೇಲೆ ಖಾಸಗಿ ಅಭ್ಯರ್ಥಿಯಾಗಿ ನೊಂದಾಯಿಸಿಕೊಳ್ಳಲು ಬಂದಾಗ ಪ್ರಾಂಶುಪಾಲರು ತಮ್ಮ ಹಂತದಲ್ಲಿಯೇ ಪರಿಶೀಲಿಸಿ 20 ರೂಗಳ ಛಾಪಾ ಕಾಗದದಲ್ಲಿ ಇಲಾಖೆಯಿಂದ ಒದಗಿಸಿರುವ ನಿಗದಿತ ನಮೂನೆಯಲ್ಲಿ ಅಭ್ಯರ್ಥಿಯಿಂದ ದೃಢೀಕರಣ ಪಡೆಯುವುದು. (ದೃಢೀಕರಣ ಪತ್ರದ ಮಾದರಿಯನ್ನು ಸುತ್ತೋಲೆಯೊಂದಿಗೆ ಲಗತ್ತಿಸಿದೆ)

12. ಖಾಸಗಿ ಅಭ್ಯರ್ಥಿಗಳು ಕಲಾ ಅಥವಾ ವಾಣಿಜ್ಯ ಸಂಯೋಜನೆಯಲ್ಲಿ ಮಾತ್ರ ಭಾಗ–1 ರಲ್ಲಿ ಎರಡು ಭಾಷಾ ವಿಷಯಗಳನ್ನು ಹಾಗೂ ಭಾಗ–2 ರಲ್ಲಿ ನಾಲ್ಕು ಐಚ್ಛಿಕ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬೇಕು.

**ಭಾಗ–1**

| ಕ್ರ.ಸಂ. | ವಿಷಯ | Subjects | ವಿಷಯ ಸಂಕೇತ |
|---|---|---|---|
| 1 | ಕನ್ನಡ | Kannada | 01 |
| 2 | ಇಂಗ್ಲೀಷ್ | English | 02 |
| 3 | ಹಿಂದಿ | Hindi | 03 |
| 4 | ತಮಿಳು | Tamil | 04 |
| 5 | ತೆಲುಗು | Telugu | 05 |
| 6 | ಮಲಯಾಳಂ | Malayalam | 06 |
| 7 | ಮರಾಠಿ | Marathi | 07 |
| 8 | ಉರ್ದು | Urdu | 08 |
| 9 | ಸಂಸ್ಕೃತ | Sanskrit | 09 |
| 10 | ಅರೇಬಿಕ್ | Arabic | 11 |

**ಭಾಗ–2**

(ಭಾಗ–2 ರಲ್ಲಿ ಈ ಕೆಳಗೆ ನೀಡಿರುವ ಸಂಯೋಜನೆಗಳಂತೆ ನಾಲ್ಕು ವಿಷಯಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬೇಕು)

**ಕಲಾ ಸಂಯೋಜನೆ:**

| ಕ್ರ.ಸಂ. | ವಿಷಯಗಳು ಹಾಗೂ ವಿಷಯ ಸಂಕೇತ ಸಂಖ್ಯೆಗಳು | | | | | | | |
|---|---|---|---|---|---|---|---|---|
| 1 | ಇತಿಹಾಸ | 21 | ಅರ್ಥಶಾಸ್ತ್ರ | 22 | ಸಮಾಜಶಾಸ್ತ್ರ | 28 | ರಾಜ್ಯಶಾಸ್ತ್ರ | 29 |
| 2 | ಇತಿಹಾಸ | 21 | ಅರ್ಥಶಾಸ್ತ್ರ | 22 | ಭೂಗೋಳಶಾಸ್ತ್ರ | 24 | ರಾಜ್ಯಶಾಸ್ತ್ರ | 29 |
| 3 | ಇತಿಹಾಸ | 21 | ಅರ್ಥಶಾಸ್ತ್ರ | 22 | ತರ್ಕಶಾಸ್ತ್ರ | 23 | ರಾಜ್ಯಶಾಸ್ತ್ರ | 29 |
| 4 | ಇತಿಹಾಸ | 21 | ಅರ್ಥಶಾಸ್ತ್ರ | 22 | ರಾಜ್ಯಶಾಸ್ತ್ರ | 29 | ಐಚ್ಛಿಕ ಕನ್ನಡ | 16 |
| 5 | ಇತಿಹಾಸ | 21 | ಅರ್ಥಶಾಸ್ತ್ರ | 22 | ರಾಜ್ಯಶಾಸ್ತ್ರ | 29 | ಶಿಕ್ಷಣ | 52 |
| 6 | ಇತಿಹಾಸ | 21 | ಅರ್ಥಶಾಸ್ತ್ರ | 22 | ಸಮಾಜಶಾಸ್ತ್ರ | 28 | ಶಿಕ್ಷಣ | 52 |

**ವಾಣಿಜ್ಯ ಸಂಯೋಜನೆ:**

| ಕ್ರ. ಸಂ. | ವಿಷಯಗಳು ಹಾಗೂ ವಿಷಯ ಸಂಕೇತ ಸಂಖ್ಯೆಗಳು | | | | | | | |
|---|---|---|---|---|---|---|---|---|
| 1 | ಇತಿಹಾಸ | 21 | ಅರ್ಥಶಾಸ್ತ್ರ | 22 | ವ್ಯವಹಾರ ಅಧ್ಯಯನ | 27 | ಲೆಕ್ಕಶಾಸ್ತ್ರ | 30 |
| 2 | ಅರ್ಥಶಾಸ್ತ್ರ | 22 | ಭೂಗೋಳಶಾಸ್ತ್ರ | 24 | ವ್ಯವಹಾರ ಅಧ್ಯಯನ | 27 | ಲೆಕ್ಕಶಾಸ್ತ್ರ | 30 |
| 3 | ಅರ್ಥಶಾಸ್ತ್ರ | 22 | ವ್ಯವಹಾರ ಅಧ್ಯಯನ | 27 | ಲೆಕ್ಕಶಾಸ್ತ್ರ | 30 | ಮೂಲಗಣಿತ | 75 |
| 4 | ವ್ಯವಹಾರ ಅಧ್ಯಯನ | 27 | ಲೆಕ್ಕಶಾಸ್ತ್ರ | 30 | ಸಂಖ್ಯಾಶಾಸ್ತ್ರ | 31 | ಮೂಲಗಣಿತ | 75 |
| 5 | ಅರ್ಥಶಾಸ್ತ್ರ | 22 | ವ್ಯವಹಾರ ಅಧ್ಯಯನ | 27 | ಸಮಾಜಶಾಸ್ತ್ರ | 28 | ಲೆಕ್ಕಶಾಸ್ತ್ರ | 30 |
| 6 | ಅರ್ಥಶಾಸ್ತ್ರ | 22 | ವ್ಯವಹಾರ ಅಧ್ಯಯನ | 27 | ರಾಜ್ಯಶಾಸ್ತ್ರ | 29 | ಲೆಕ್ಕಶಾಸ್ತ್ರ | 30 |

(Part-2)

(Candidates should select four subjects as per the combination)

## Arts Combination

| Sl.No. | Subjects & Subject Code Numbers | | | | | | | |
|---|---|---|---|---|---|---|---|---|
| 1 | History | 21 | Economics | 22 | Sociology | 28 | Political Science | 29 |
| 2 | History | 21 | Economics | 22 | Geography | 24 | Political Science | 29 |
| 3 | History | 21 | Economics | 22 | Logic | 23 | Political Science | 29 |
| 4 | History | 21 | Economics | 22 | Political Science | 29 | Optional Kannada | 16 |
| 5 | History | 21 | Economics | 22 | Political Science | 29 | Education | 52 |
| 6 | History | 21 | Economics | 22 | Sociology | 28 | Education | 52 |

## Commerce Combination

| Sl.No. | Subjects & Subject Code Numbers | | | | | | | |
|---|---|---|---|---|---|---|---|---|
| 1 | History | 21 | Economics | 22 | Business studies | 27 | Accountancy | 30 |
| 2 | Economics | 22 | Geography | 24 | Business studies | 27 | Accountancy | 30 |
| 3 | Economics | 22 | Business studies | 27 | Accountancy | 30 | Basic Maths | 75 |
| 4 | Business studies | 27 | Accountancy | 30 | Statistics | 31 | Basic Maths | 75 |
| 5 | Economics | 22 | Business studies | 27 | Sociology | 28 | Accountancy | 30 |
| 6 | Economics | 22 | Business studies | 27 | Political Science | 29 | Accountancy | 30 |

**ವಿಶೇಷ ಸೂಚನೆ:**

1. 2023–24ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ರೆಗ್ಯುಲರ್ ಅಥವಾ ರಿಪೀಟರ್ ಅಭ್ಯರ್ಥಿಗಳಾಗಿ ಹಾಜರಾಗುವವರು ಖಾಸಗಿ ಅಭ್ಯರ್ಥಿಗಳಾಗಿ ನೊಂದಾಯಿಸಿಕೊಳ್ಳುವುದನ್ನು ನಿಷೇಧಿಸಲಾಗಿದೆ. ಒಂದು ವೇಳೆ ನೊಂದಾಯಿಸಿದ್ದಲ್ಲಿ ಪ್ರಾಂಶುಪಾಲರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು ಹಾಗೂ ವಿದ್ಯಾರ್ಥಿಯ ನೊಂದಣಿಯನ್ನು ರದ್ದುಗೊಳಿಸಲಾಗುವುದು.
2. ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಳ್ಳಲು ಅರ್ಹವಲ್ಲದ ಅರ್ಜಿಯನ್ನು ಇಲಾಖೆಯು ತಿರಸ್ಕರಿಸಿದಲ್ಲಿ ಪಾವತಿಸಿರುವ ಶುಲ್ಕವನ್ನು ಹಿಂತಿರುಗಿಸಲಾಗುವುದಿಲ್ಲ. ಇದಕ್ಕೆ ಪ್ರಾಂಶುಪಾಲರೇ ನೇರ ಜವಾಬ್ದಾರರಾಗುತ್ತಾರೆ ಮತ್ತು ಅವರ ವಿರುದ್ದ ನಿಯಮಾನುಸಾರ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು.
3. ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಳ್ಳುವಾಗ, ಈ ಸುತ್ತೋಲೆಯಲ್ಲಿ ನಿಗದಿಪಡಿಸಿರುವ ಸಂಯೋಜನೆಗಳನ್ನು ಮಾತ್ರ ಅಭ್ಯರ್ಥಿಗಳು ಆಯ್ಕೆ ಮಾಡಿಕೊಳ್ಳುವಂತೆ ಪ್ರಾಂಶುಪಾಲರು ಎಚ್ಚರಿಕೆ ವಹಿಸಬೇಕು.
4. ಭರ್ತಿ ಮಾಡಿದ ಅರ್ಜಿಗಳನ್ನು ಮತ್ತು ಸಂಬಂಧಿಸಿದ ದಾಖಲೆಗಳನ್ನು ನಿಗದಿತ ದಿನಾಂಕದಂದು ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರು/ಸಿಬ್ಬಂದಿಯವರು ನೇರವಾಗಿ ಸಲ್ಲಿಸಬೇಕು ಹಾಗೂ ಸಲ್ಲಿಸಿದ ದಾಖಲೆಗಳಿಗೆ ಸ್ವೀಕೃತಿ ಪತ್ರ ಪಡೆಯುವುದು ಕಡ್ಡಾಯವಾಗಿರುತ್ತದೆ.

5. ಖಾಸಗಿ ಅಭ್ಯರ್ಥಿಗಳು ಆಯ್ಕೆ ಮಾಡಿಕೊಂಡ ಭಾಷಾ ಮತ್ತು ಐಚ್ಛಿಕ ವಿಷಯಗಳ ಬಗ್ಗೆ ಒಂದು ಪ್ರತ್ಯೇಕ ಮುಚ್ಚಳಿಕೆ ಪತ್ರ ಪಡೆಯುವುದು ಕಡ್ಡಾಯವಾಗಿರುತ್ತದೆ. ಇದೊಂದು ಪ್ರಮುಖ ದಾಖಲೆಯಾಗಿದ್ದು, ಅರ್ಜಿಗಳ ಜೊತೆಯಲ್ಲಿಡುವುದು.
6. ಖಾಸಗಿ ಅಭ್ಯರ್ಥಿಗಳು ಅರ್ಜಿ ಮತ್ತು ಮುಚ್ಚಳಿಕೆ ಪತ್ರದಲ್ಲಿ ನಮೂದಿಸಿರುವ ಭಾಷಾ ಮತ್ತು ಐಚ್ಛಿಕ ವಿಷಯಗಳಲ್ಲಿ ಮಾತ್ರ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುತ್ತದೆ. ಆಯ್ಕೆ ಮಾಡಿಕೊಂಡ ನಂತರ ಯಾವುದೇ ಕಾರಣಕ್ಕೂ ಭಾಷಾ ಮತ್ತು ಐಚ್ಛಿಕ ವಿಷಯಗಳ ಬದಲಾವಣೆಗೆ ಅವಕಾಶ ಇರುವುದಿಲ್ಲ.
7. **ಭಾಷಾ ವಿನಾಯಿತಿ ಪಡೆಯುವ ಬಗ್ಗೆ:**

   ಎ) ಖಾಸಗಿ ಅಭ್ಯರ್ಥಿಯಾಗಿ ನೊಂದಾಯಿಸಿಕೊಳ್ಳುವ ಅಭ್ಯರ್ಥಿಯು 10ನೇ ತರಗತಿಯಲ್ಲಿ ಭಾಷಾ ವಿನಾಯಿತಿ ಪಡೆದಿದ್ದು, ದ್ವಿತೀಯ ಪಿಯುಸಿ ಪರೀಕ್ಷೆಗೆ ಭಾಷಾ ವಿನಾಯಿತಿ ಪಡೆಯಲು ಇಚ್ಛಿಸಿದಲ್ಲಿ ಸಂಬಂಧಿಸಿದ ದಾಖಲೆಗಳೊಂದಿಗೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿಗೆ ಸಂಪರ್ಕಿಸಿ ಭಾಷಾ ವಿನಾಯಿತಿಗೆ ಅನುಮತಿ ಪಡೆಯುವುದು.

   ಬಿ) ಖಾಸಗಿ ಅಭ್ಯರ್ಥಿಯಾಗಿ ನೊಂದಾಯಿಸಿಕೊಳ್ಳುವ ಅಭ್ಯರ್ಥಿಯು 10ನೇ ತರಗತಿಯಲ್ಲಿ ಭಾಷಾ ವಿನಾಯಿತಿ ಪಡೆಯದೇ ಇದ್ದಲ್ಲಿ, ದ್ವಿತೀಯ ಪಿಯುಸಿ ಪರೀಕ್ಷೆಗೆ ಭಾಷಾ ವಿನಾಯಿತಿ ಪಡೆಯಲು ಇಚ್ಛಿಸಿದಲ್ಲಿ ಸಂಬಂಧಿಸಿದ ದಾಖಲೆಗಳೊಂದಿಗೆ ಶಾಲಾ ಶಿಕ್ಷಣ ಇಲಾಖೆಯ (ಪದವಿ ಪೂರ್ವ) ಶೈಕ್ಷಣಿಕ ಶಾಖೆಗೆ ಸಂಪರ್ಕಿಸಿ ಭಾಷಾ ವಿನಾಯಿತಿಗೆ ಅನುಮತಿ ಪಡೆಯುವುದು.

## III. ಖಾಸಗಿ ಅಭ್ಯರ್ಥಿಗಳಾಗಿ ನೊಂದಾಯಿಸಿಕೊಳ್ಳಲು ಇರುವ ನಿಬಂಧನೆಗಳು:

1. ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಖಾಸಗಿ ಅಭ್ಯರ್ಥಿಯಾಗಿ ನೊಂದಾಯಿಸಿಕೊಂಡಿರುವ ಅಭ್ಯರ್ಥಿಗೆ ನೊಂದಾಯಿಸಿಕೊಂಡಿರುವ ಕಾಲೇಜು ಅಥವಾ ಇತರೆ ನಿಗದಿಪಡಿಸಿದ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆಯುವಂತೆ ಸೂಚಿಸಲಾಗುವುದು.
2. ಖಾಸಗಿ ಅಭ್ಯರ್ಥಿಗಳಾಗಿ ನೊಂದಾಯಿಸಿಕೊಂಡಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಅರ್ಹ ಅಭ್ಯರ್ಥಿಗಳ ಪ್ರವೇಶ ಪತ್ರಗಳನ್ನು ಕಳುಹಿಸಲಾಗುವುದು.

**ಖಾಸಗಿ ಅಭ್ಯರ್ಥಿಯಾಗಿ ನೊಂದಾಯಿಸಿಕೊಳ್ಳುವ ಸಮಯದಲ್ಲಿ ಪ್ರತಿ ಅಭ್ಯರ್ಥಿಯು ಕಾಲೇಜಿನಲ್ಲಿ ಪಾವತಿಸಬೇಕಾದ ಶುಲ್ಕದ ವಿವರ:**

| ಕ್ರ.ಸಂ. | ಶುಲ್ಕದ ವಿವರ | ಇತರರು ರೂ. | ಪ.ಜಾ/ಪ.ಪಂ/ಪ್ರವರ್ಗ–1 ರೂ. |
|---|---|---|---|
| 1 | ನೊಂದಣಿ ಶುಲ್ಕ (Registration Fee) (ನೊಂದಣಿ ಶುಲ್ಕವನ್ನು ಕಾಲೇಜಿನಲ್ಲಿಯೇ ಉಳಿಸಿಕೊಂಡು ಅಂಚೆ ವೆಚ್ಚ ಹಾಗೂ ಪರಿಶೀಲನಾ ಶುಲ್ಕವಾಗಿ ಪ್ರಾಂಶುಪಾಲರು ಮತ್ತು ಸಿಬ್ಬಂದಿ ಉಪಯೋಗಿಸಬಹುದು) | 60–00 | 60–00 |
| 2 | ದಾಖಲಾತಿ ಶುಲ್ಕ (Admission Fee common to all) | 400–00 | 400–00 |
| 3 | ಕಾಲೇಜು ಅಭಿವೃದ್ಧಿ ಶುಲ್ಕ (ವಸೂಲಾದ ಈ ಶುಲ್ಕವನ್ನು ಕಾಲೇಜು ಸಂಚಿತ ನಿಧಿಗೆ ಜಮೆ ಮಾಡಿ ಮೂಲಭೂತ ಸೌಕರ್ಯಗಳಿಗಾಗಿ ಉಪಯೋಗಿಸಲು ಪ್ರಸ್ತಾವನೆ ಕಳುಹಿಸಿ ನಿರ್ದೇಶಕರ ಅನುಮತಿ ಪಡೆಯಬೇಕು) | 1020–00 | 1020–00 |

| | | | |
|---|---|---|---|
| 4 | ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡ/ಪ್ರವರ್ಗ–1 ರ ವಿದ್ಯಾರ್ಥಿಗಳಿಗೆ (ಪರೀಕ್ಷಾ ಶುಲ್ಕ) ಅಂಕಪಟ್ಟಿ ಶುಲ್ಕ | 80–00 | 80–00 |
| 5 | ಪರೀಕ್ಷಾ ಶುಲ್ಕ | 400–00 | Nil |
| | **ಒಟ್ಟು ಮೊತ್ತ** | **1960–00** | **1560–00** |

ಯಾವುದೇ ಕಾರಣಕ್ಕೂ ಮೇಲೆ ನಮೂದಿಸಿರುವ ಶುಲ್ಕಕ್ಕಿಂತ ಹೆಚ್ಚಿನ ಶುಲ್ಕವನ್ನು ವಸೂಲು ಮಾಡಬಾರದು.

**ಖಾಸಗಿ ಅಭ್ಯರ್ಥಿಗಳ ಮಾಹಿತಿಯನ್ನು ಕೆ.ಎಸ್.ಇ.ಎ.ಬಿ. ಮಂಡಲಿಯ ಜಾಲತಾಣದ PU EXAM PORTAL Login ನಲ್ಲಿ ದಾಖಲಿಸುವ ಬಗ್ಗೆ:–**

- ಪ್ರಾಂಶುಪಾಲರು **PU EXAM PORTAL Login** ನಲ್ಲಿ ಅಭ್ಯರ್ಥಿಯ ವಿವರಗಳನ್ನು ಭರ್ತಿ ಮಾಡುವಲ್ಲಿ ಉಪನ್ಯಾಸಕರ ಸಹಕಾರವನ್ನು ಪಡೆದುಕೊಳ್ಳುವುದು.
- ಅಭ್ಯರ್ಥಿಯ ಭಾವಚಿತ್ರವನ್ನು ಖಾತರಿಪಡಿಸಿಕೊಂಡು ಸ್ಕ್ಯಾನಿಂಗ್ ಮಾಡಿ ಪಿಯು ಎಕ್ಸಾಂ ಪೋರ್ಟಲ್ ಲಾಗಿನ್‌ನಲ್ಲಿ ಅಪ್‌ಲೋಡ್ ಮಾಡುವುದು.
- ಅಭ್ಯರ್ಥಿಗಳ ಮಾಹಿತಿಯನ್ನು ನಿಗದಿತ ದಿನಾಂಕದೊಳಗೆ ನಿಖರವಾಗಿ ಭರ್ತಿ ಮಾಡುವುದು.
- ಪಿಯು ಎಕ್ಸಾಂ ಪೋರ್ಟಲ್ ಲಾಗಿನ್‌ನಲ್ಲಿ ಅಭ್ಯರ್ಥಿಯ ಮಾಹಿತಿ, ವಿದ್ಯಾರ್ಥಿಗಳ ಸ್ಯಾಟ್ಸ್ ಸಂಖ್ಯೆ (ಲಭ್ಯವಿದ್ದಲ್ಲಿ), ಆಯ್ಕೆ ಮಾಡಿಕೊಂಡಿರುವ ವಿಷಯಗಳನ್ನು ಭರ್ತಿ ಮಾಡಿದ ನಂತರ ಪುನರ್ ಪರಿಶೀಲಿಸಿಕೊಳ್ಳುವುದು. ಯಾವುದೇ ಕಾರಣಕ್ಕೂ ಭಾಷಾ ವಿಷಯಗಳ ಬದಲಾವಣೆಗೆ ಅವಕಾಶ ಇರುವುದಿಲ್ಲ.
- ಯಾವುದೇ ಲೋಪಗಳಾದಲ್ಲಿ ಪ್ರಾಂಶುಪಾಲರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.
- ಆನ್‌ಲೈನ್ ಅರ್ಜಿಗಳಿಗೆ ಕ್ರಮಾಂಕಗಳನ್ನು 6001 ರಿಂದ ನೀಡುವುದು.

**ಶುಲ್ಕ ಪಾವತಿಸಲು ಹಾಗೂ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:**

| ಕ್ರ.ಸಂ. | ವಿವರ | ಅಭ್ಯರ್ಥಿಗಳು ಕಾಲೇಜಿಗೆ ಶುಲ್ಕ ಪಾವತಿಸಲು ಕಡೆಯ ದಿನಾಂಕ | ಕಾಲೇಜಿನವರು ಪರೀಕ್ಷಾ ಶುಲ್ಕವನ್ನು ಖಜಾನೆಗೆ ಸಂದಾಯ ಮಾಡುವ ದಿನಾಂಕ | ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಭರ್ತಿ ಮಾಡಲು ಕೊನೆಯ ದಿನಾಂಕ | ಕಾಲೇಜಿನವರು ಅರ್ಜಿಗಳನ್ನು ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಸಲ್ಲಿಸುವ ದಿನಾಂಕ |
|---|---|---|---|---|---|
| 1 | ದಂಡ ಶುಲ್ಕವಿಲ್ಲದೆ | 31–10–2023 | 02–11–2023 | 02–11–2023 | 03–11–2023 |
| 2 | ದಂಡ ಶುಲ್ಕದೊಂದಿಗೆ ರಜಾ ದಿನಗಳನ್ನು ಹೊರತುಪಡಿಸಿ | 13–11–2023 | 14–11–2023 | 14–11–2023 | 15–11–2023 |

| | | | | | |
|---|---|---|---|---|---|
| | ಪರೀಕ್ಷಾ ಶುಲ್ಕದ ಜೊತೆಗೆ ದಿನವೊಂದಕ್ಕೆ ರೂ. 50–00 ರಂತೆ ಗರಿಷ್ಠ ರೂ. 500–00 | | | | |

**ನಿಗದಿಗೊಳಿಸಿರುವ ದಿನಾಂಕದ ನಂತರ ಅರ್ಜಿಗಳನ್ನು ಸಲ್ಲಿಸಿದಲ್ಲಿ ತಿರಸ್ಕರಿಸಲಾಗುವುದು.**

- ಶುಲ್ಕವನ್ನು ಖಜಾನೆ ಚಲನ್ ಮೂಲಕ **"0202–01–101–1–06 (ಇತರೆ ಪರೀಕ್ಷೆ ಶುಲ್ಕ)"** ಈ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಬೇಕು.
- ಕಾಲೇಜಿನ ರಶೀದಿ ಪುಸ್ತಕದ ಮೂಲಕ ಸ್ವೀಕರಿಸಲಾದ ನೊಂದಣಿ ಶುಲ್ಕ ರೂ. 60–00 ನ್ನು ಅಂಚೆ ವೆಚ್ಚ ಹಾಗೂ ಅರ್ಜಿಗಳ ಪರಿಶೀಲನಾ ಸಂಭಾವನೆಯಾಗಿ ಪ್ರಾಂಶುಪಾಲರು ಮತ್ತು ಸಂಬಂಧಿಸಿದ ಸಿಬ್ಬಂದಿ ಉಪಯೋಗಿಸಿಕೊಳ್ಳಬಹುದು.

## IV. ಅಭ್ಯರ್ಥಿಯು ಅರ್ಜಿಯ ಜೊತೆಗೆ ಕಾಲೇಜಿಗೆ ಸಲ್ಲಿಸಬೇಕಾಗಿರುವ ದಾಖಲೆಗಳು:–

1. ಎಸ್.ಎಸ್.ಎಲ್.ಸಿ. ಪರೀಕ್ಷೆಯ ಮೂಲ (Original) ಉತ್ತೀರ್ಣ ಪ್ರಮಾಣ ಪತ್ರದೊಂದಿಗೆ ಎರಡು ದೃಢೀಕೃತ ನಕಲು ಪ್ರತಿಗಳನ್ನು ಸಲ್ಲಿಸುವುದು.
2. ಅಭ್ಯರ್ಥಿಯ ಇತ್ತೀಚಿನ ಮೂರು ಪಾಸ್‌ಪೋರ್ಟ್ ಸೈಜಿನ ಭಾವಚಿತ್ರಗಳನ್ನು (Photo) ಸಲ್ಲಿಸಬೇಕು. (ಪಾಸ್‌ಪೋರ್ಟ್ ಸೈಜಿನದಲ್ಲದೆ ಬೇರೆ ಸೈಜಿನ ಫೋಟೊವನ್ನು ಸಲ್ಲಿಸಬಾರದು)
3. ಅಭ್ಯರ್ಥಿಯು ಈ ಹಿಂದೆ ವ್ಯಾಸಂಗ ಮಾಡಿದ ಸಂಸ್ಥೆಯಿಂದ ಮೂಲ ವರ್ಗಾವಣೆ ಪತ್ರವನ್ನು (Original Transfer Certificate) ಪಡೆದು ನೀಡಬೇಕು.
4. ದ್ವಿತೀಯ ಪಿಯುಸಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳು, ಪಿಯುಸಿ ಮೂಲ ವರ್ಗಾವಣೆ ಪತ್ರ ಮತ್ತು ದ್ವಿತೀಯ ಪಿಯುಸಿ ಮೂಲ ಅನುತ್ತೀರ್ಣ ಅಂಕಪಟ್ಟಿ/ಫಲಿತಾಂಶ ಪಟ್ಟಿಯನ್ನು ಸಲ್ಲಿಸಬೇಕು.
5. ಅಭ್ಯರ್ಥಿಯು ಎಸ್.ಎಸ್.ಎಲ್.ಸಿ. ಉತ್ತೀರ್ಣರಾದ ಸಂಸ್ಥೆಯ ಮುಖ್ಯೋಪಾಧ್ಯಾಯರಿಂದ/ ಪ್ರಾಂಶುಪಾಲರಿಂದ ದೃಢೀಕರಿಸಲ್ಪಟ್ಟ ಒಂದು ಭಾವಚಿತ್ರವನ್ನು ಎಸ್.ಎಸ್.ಎಲ್.ಸಿ. ಜೆರಾಕ್ಸ್ ಮಾರ್ಕ್ಸ್ ಕಾರ್ಡ್ ಪ್ರತಿಗೆ ಅಂಟಿಸಿ ಸಲ್ಲಿಸಬೇಕು.
6. ಸ್ವವಿಳಾಸ ಬರೆದಿರುವ ಮತ್ತು ಅಂಚೆ ಚೀಟಿ ಅಂಟಿಸಿರುವ ಎರಡು ಪೋಸ್ಟಲ್ ಲಕೋಟೆಗಳನ್ನು ನೀಡಬೇಕು. ಈ ಲಕೋಟೆಗಳನ್ನು ಪ್ರಾಂಶುಪಾಲರು ಅಭ್ಯರ್ಥಿಗಳಿಗೆ ಯಾವುದೇ ಮಾಹಿತಿ ತಿಳಿಸುವ ಅಥವಾ ಅವರಿಂದ ತರಿಸಿಕೊಳ್ಳುವ ಉದ್ದೇಶಕ್ಕೆ ಬಳಸಿಕೊಳ್ಳುವುದು.
7. ಅಭ್ಯರ್ಥಿಯು ಅಂಗವಿಕಲರಾಗಿದ್ದಲ್ಲಿ ಜಿಲ್ಲಾ ಸರ್ಜನ್‌ರವರಿಂದ ದೃಢೀಕರಿಸಿದ ವೈದ್ಯಕೀಯ ಪ್ರಮಾಣ ಪತ್ರ ನೀಡಬೇಕು.
8. ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಅಭ್ಯರ್ಥಿಗಳು ತಹಶೀಲ್ದಾರ್ ರವರಿಂದ ಪಡೆದ ಪ್ರಮಾಣ ಪತ್ರದ ದೃಢೀಕೃತ ಪ್ರತಿಯನ್ನು ಸಲ್ಲಿಸಬೇಕು.
9. ದೃಢೀಕೃತ ಆಧಾರ್ ಕಾರ್ಡ್‌ನ ಪ್ರತಿ.

**V. ಪ್ರಾಂಶುಪಾಲರು ಖಾಸಗಿ ಅಭ್ಯರ್ಥಿಗಳ ಹೆಸರನ್ನು ನೊಂದಾಯಿಸಿಕೊಳ್ಳುವಾಗ ವಿಶೇಷವಾಗಿ ಗಮನಹರಿಸಬೇಕಾದ ಅಂಶಗಳು:–**

1. ಖಾಸಗಿ ಅಭ್ಯರ್ಥಿಗಳ ನೊಂದಾವಣಿ ಸಂಖ್ಯೆಯು 200 ಕ್ಕಿಂತ ಹೆಚ್ಚಾದಲ್ಲಿ, ಆ ಕಾಲೇಜಿನ ಪ್ರಾಚಾರ್ಯರು ಮಂಡಲಿಯಿಂದ ಪೂರ್ವಾನುಮತಿ ಪಡೆದುಕೊಳ್ಳುವುದು.

2. ಅರ್ಜಿ ನಮೂನೆಗಳನ್ನು ಎಚ್ಚರಿಕೆಯಿಂದ ಭರ್ತಿ ಮಾಡುವುದು ಹಾಗೂ ನಿಗದಿತ ದಿನಾಂಕದೊಳಗೆ ಆನ್‌ಲೈನ್ ಪೋರ್ಟಲ್‌ನಲ್ಲಿ ಅಪ್‌ಡೇಟ್ ಮಾಡಬೇಕು.

3. ಕಾಲೇಜಿನ ಸಮೀಪದ ಸ್ಥಳಗಳಿಂದ ಬರುವ ವಿದ್ಯಾರ್ಥಿಗಳನ್ನು ಮಾತ್ರ ನೊಂದಾಯಿಸಿಕೊಳ್ಳುವುದು. ವಾಸಸ್ಥಳದ ಅಥವಾ ಉದ್ಯೋಗದ ದೃಢೀಕರಣಕ್ಕೆ ಸೂಕ್ತ ದಾಖಲೆಗಳನ್ನು ಪಡೆದು ಪರಿಶೀಲಿಸಿ ದೃಢಪಡಿಸಿಕೊಳ್ಳುವುದು.

4. ಅಭ್ಯರ್ಥಿಯ ವಾಸಸ್ಥಳಕ್ಕೆ ಹತ್ತಿರದ ಪ್ರದೇಶದಲ್ಲಿ ಬೇರೆ ಸರ್ಕಾರಿ ಪದವಿ ಪೂರ್ವ ಕಾಲೇಜು ಇದ್ದಲ್ಲಿ, ಅಂತಹ ಅಭ್ಯರ್ಥಿಗೆ ಆ ಕಾಲೇಜಿನಲ್ಲಿಯೇ ನೊಂದಾಯಿಸಿಕೊಳ್ಳಲು ತಿಳಿಸುವುದು.

5. ಖಾಸಗಿ ಅಭ್ಯರ್ಥಿಗಳಿಗಾಗಿಯೇ ಪ್ರತ್ಯೇಕ ದಾಖಲಾತಿ ವಹಿಯನ್ನು (Admission Register) ತೆರೆಯುವುದು. ಹಿಂದಿನ ವರ್ಷಗಳಲ್ಲಿಯೇ ದಾಖಲಾತಿ ವಹಿಯನ್ನು ತೆರೆದಿದ್ದಲ್ಲಿ, ಅದರಲ್ಲಿಯೇ ಮುಂದುವರಿಸುವುದು ಹಾಗೂ ರೆಗ್ಯುಲರ್ ವಿದ್ಯಾರ್ಥಿಗಳ ರೀತಿ ಎಲ್ಲಾ ವಿವರಗಳನ್ನು ದಾಖಲಿಸುವುದು.

6. ಅಭ್ಯರ್ಥಿಗಳಿಂದ ಪಡೆಯುವ ಮೂರು ಭಾವಚಿತ್ರಗಳಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣರಾದ ಸಂಸ್ಥೆಯ ಮುಖ್ಯೋಪಾಧ್ಯಾಯರಿಂದ/ಪ್ರಾಂಶುಪಾಲರಿಂದ ದೃಢೀಕರಿಸಲ್ಪಟ್ಟ ಎರಡು ಫೋಟೋಗಳಲ್ಲಿ ಒಂದು ಎಸ್.ಎಸ್.ಎಲ್.ಸಿ. ಜೆರಾಕ್ಸ್ ಮಾರ್ಕ್ಸ್‌ಕಾರ್ಡ್‌ಗೆ ಅಂಟಿಸಬೇಕು. ಇನ್ನೊಂದು ಭಾವಚಿತ್ರವನ್ನು ದಾಖಲಾತಿ ಪುಸ್ತಕದಲ್ಲಿ ಅಂಟಿಸಿ ವಿದ್ಯಾರ್ಥಿ ಸಹಿ ಪಡೆಯಬೇಕು. ದೃಢೀಕರಣವಿಲ್ಲದ ಮೂರನೇ ಫೋಟೋವನ್ನು ಅರ್ಜಿಯ ಮೇಲೆ ಅಂಟಿಸುವುದು ಹಾಗೂ ಸ್ಕ್ಯಾನ್ ಮಾಡಿ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಬೇಕು.

7. ನೊಂದಣಿ ಸಮಯದಲ್ಲಿ ಅಭ್ಯರ್ಥಿಗಳಿಂದ ಪಡೆಯುವ ಮೂಲ ವರ್ಗಾವಣೆ ಪತ್ರ ಹಾಗೂ ಇನ್ನಿತರೆ ದಾಖಲೆಗಳ ಪ್ರತಿಗಳನ್ನು ಕಾಲೇಜಿನಲ್ಲಿಯೇ ಕಾಯ್ದಿರಿಸುವುದು. ಎಸ್.ಎಸ್.ಎಲ್.ಸಿ. ಮೂಲ ಪ್ರಮಾಣ ಪತ್ರವನ್ನು (ಉತ್ತೀರ್ಣ ಅಂಕಪಟ್ಟಿ) ಮಾತ್ರ ಪ್ರವೇಶ ಪತ್ರ ವಿತರಿಸಿದ ನಂತರ ಅಭ್ಯರ್ಥಿಗಳಿಗೆ ಹಿಂತಿರುಗಿಸುವುದು.

8. ಕರೆಸ್ಪಾಂಡೆನ್ಸ್ ಕಾಲೇಜುಗಳು ಎಂಬ ಹೆಸರಿನೊಂದಿಗೆ ವ್ಯವಹರಿಸುವ ಅಥವಾ ಯಾರೇ ಮಧ್ಯವರ್ತಿಗಳ ಮೂಲಕ ಬರುವ ಅರ್ಜಿಗಳನ್ನು ಮಾನ್ಯ ಮಾಡದೇ ಅವುಗಳನ್ನು ತಿರಸ್ಕರಿಸುವುದು. ಪ್ರತಿ ಅಭ್ಯರ್ಥಿಯು ವೈಯಕ್ತಿಕವಾಗಿ ನೊಂದಾಯಿಸಿಕೊಳ್ಳಲು ಬಂದಲ್ಲಿ ಮಾತ್ರ ಮಾನ್ಯ ಮಾಡುವುದು. ಅಭ್ಯರ್ಥಿಯ ಪರವಾಗಿ ಮತ್ತೊಬ್ಬರು ಅರ್ಜಿ ಸಲ್ಲಿಸಲು ಅವಕಾಶ ಇರುವುದಿಲ್ಲ. ಮಧ್ಯವರ್ತಿಗಳ ಮೂಲಕ ಬರುವ ಅರ್ಜಿಗಳನ್ನು ಮಾನ್ಯ ಮಾಡುವ ಪ್ರಾಂಶುಪಾಲರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು.

9. ಅರ್ಜಿ ಹಾಗೂ ಶುಲ್ಕವನ್ನು ಸ್ವೀಕರಿಸುವಾಗ ಮೂಲ ದಾಖಲೆ ಪತ್ರಗಳನ್ನು ಪರಿಶೀಲಿಸಿ, ಅರ್ಹ ಅಭ್ಯರ್ಥಿಗಳನ್ನು ಮಾತ್ರ ನೊಂದಾಯಿಸಿಕೊಳ್ಳುವುದು.

10. ಬಾಲಕಿಯರ ಕಾಲೇಜಿನಲ್ಲಿ ಬಾಲಕಿಯರನ್ನು ಮಾತ್ರ ನೊಂದಾಯಿಸಿಕೊಳ್ಳಬೇಕು.

11. ಕಾಲೇಜಿನ ಇಬ್ಬರು ಉಪನ್ಯಾಸಕರು, ದಾಖಲೆಗಳ ಆಧಾರದ ಮೇಲೆ ಅರ್ಜಿ ನಮೂನೆಗಳಲ್ಲಿ ಅಭ್ಯರ್ಥಿಗಳ ಮಾಹಿತಿ ಭರ್ತಿ ಮಾಡುವ ಮತ್ತು ಆನ್‌ಲೈನ್‌ನಲ್ಲಿ ದಾಖಲಿಸುವ ಕಾರ್ಯವನ್ನು ನಿರ್ವಹಿಸುವುದು. ಈ ಸಂಬಂಧ ಅನುಬಂಧದಲ್ಲಿ ನೀಡಿರುವಂತೆ ದಸ್ತಾವೇಜನ್ನು ಪ್ರತಿ ಅಭ್ಯರ್ಥಿಗೆ ದ್ವಿಪ್ರತಿಯಲ್ಲಿ ಸಿದ್ಧಪಡಿಸಿ, ಒಂದು ಪ್ರತಿಯನ್ನು ಇತರೆ ದಾಖಲೆಗಳೊಂದಿಗೆ ಕೇಂದ್ರ ಕಛೇರಿಗೆ ಸಲ್ಲಿಸತಕ್ಕದ್ದು.

12. ಅಭ್ಯರ್ಥಿಗಳಿಂದ ಮೂಲ ದಾಖಲೆಗಳನ್ನು ಪಡೆಯುವುದರ ಜೊತೆಗೆ, ಅವುಗಳ ಎರಡು ಜೆರಾಕ್ಸ್ ಪ್ರತಿಗಳನ್ನು ಪಡೆದು ಅವುಗಳನ್ನು ಮೂಲ ಪ್ರತಿಗಳೊಂದಿಗೆ ಪರಿಶೀಲಿಸಿ, ದೃಢೀಕರಿಸಿ ಒಂದು ಸೆಟ್ ಜೆರಾಕ್ಸ್ ದಾಖಲಾತಿ ಪ್ರತಿಗಳನ್ನು ಅರ್ಜಿಯೊಡನೆ ಪ್ರತ್ಯೇಕವಾಗಿ ಸಲ್ಲಿಸಬೇಕು. ಉಳಿದ ಒಂದು ಮೂಲ ಹಾಗೂ ಒಂದು ಜೆರಾಕ್ಸ್ ದಾಖಲಾತಿ ಪ್ರತಿಗಳನ್ನು ಕಾಲೇಜಿನಲ್ಲಿಯೇ ಇಟ್ಟುಕೊಳ್ಳುವುದು ಹಾಗೂ ಪರಿಶೀಲನೆಯ ಸಂದರ್ಭದಲ್ಲಿ ಸಲ್ಲಿಸುವುದು.

13. ಎಸ್.ಎಸ್.ಎಲ್.ಸಿ. ಮೂಲ ಪ್ರಮಾಣ ಪತ್ರಗಳನ್ನು ಪರಿಶೀಲಿಸುವ ಜವಾಬ್ದಾರಿಯನ್ನು ಕಾಲೇಜಿನ ಹಂತಕ್ಕೆ ನಿಗದಿಗೊಳಿಸಿರುವುದರಿಂದ ಕಾಲೇಜಿನ ಪ್ರಾಂಶುಪಾಲರು ಮೂಲ ಪ್ರಮಾಣ ಪತ್ರಗಳನ್ನು ಖುದ್ದಾಗಿ ಪರಿಶೀಲಿಸಿ ನೈಜತೆಯನ್ನು ಖಚಿತಪಡಿಸಿಕೊಂಡ ನಂತರ ನೊಂದಾಯಿಸಿಕೊಳ್ಳುವುದು.

14. ತಿರಸ್ಕರಿಸಲಾದ ಅರ್ಜಿಗಳ ವಿವರಗಳನ್ನು ಸಂಬಂಧಿಸಿದ ಪ್ರಾಚಾರ್ಯರ ಗಮನಕ್ಕೆ ತರಲಾಗುವುದು.

15. ಖಾಸಗಿ ಅಭ್ಯರ್ಥಿಗಳಿಗೆ ಪರೀಕ್ಷಾ ಕೇಂದ್ರಗಳನ್ನು ರ್‍ಯಾಂಡಮ್ ಆಗಿ ಆಯ್ಕೆ ಮಾಡಿ ಪ್ರವೇಶ ಪತ್ರಗಳನ್ನು ನೀಡಲಾಗುವುದು.

16. ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿಯಿಂದ ಹಾಗೂ ಜಿಲ್ಲಾ ಉಪನಿರ್ದೇಶಕರ ಕಛೇರಿಯಿಂದ ಅಧಿಕಾರಿಗಳು ತಪಾಸಣೆ ಮಾಡಲು ಬರುವುದರಿಂದ ಪರಿಶೀಲನೆಗಾಗಿ ಮೂಲ ದಾಖಲೆಗಳನ್ನು ಒದಗಿಸುವುದು.

## VI. ಅರ್ಜಿ ನಮೂನೆಗಳೊಂದಿಗೆ ಪ್ರಾಂಶುಪಾಲರು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು (ಪದವಿ ಪೂರ್ವ) ಕಛೇರಿಗೆ ಸಲ್ಲಿಸಬೇಕಾಗಿರುವ ದಾಖಲೆಗಳು:–

1. ಭರ್ತಿ ಮಾಡಲಾದ ಅರ್ಜಿ ನಮೂನೆಗಳನ್ನು ಪ್ರತ್ಯೇಕ ಲಕೋಟೆಗಳಲ್ಲಿ (INNER COVER) ಹಾಕುವುದು. ಒಂದು ಲಕೋಟೆಯಲ್ಲಿ ಗರಿಷ್ಠ 100 ಅರ್ಜಿಗಳನ್ನು ಮಾತ್ರ ತುಂಬಿಸುವುದು ಹಾಗೂ ಪ್ರತಿಯೊಂದು ಲಕೋಟೆಯ ಮೇಲೆ ಲಕೋಟೆ ಸಂಖ್ಯೆಯನ್ನು ನಮೂದಿಸುವುದು ಹಾಗೂ ಪ್ರತಿಯೊಂದು ಲಕೋಟೆಯ ಮೇಲೆ ಲಕೋಟೆ ಸಂಖ್ಯೆಯನ್ನು ನಮೂದಿಸುವುದು. (ಉದಾ: 3 ಲಕೋಟೆಗಳು ಇದ್ದಲ್ಲಿ 1/3, 2/3, 3/3 ....) ಲಕೋಟೆಗಳ ಮೇಲೆ ಅರ್ಜಿಗಳ ಒಟ್ಟು ಸಂಖ್ಯೆಯನ್ನು ಕಡ್ಡಾಯವಾಗಿ ಲಕೋಟೆಯ ಮೇಲೆ ನಮೂದಿಸುವುದು.
2. 10ನೇ ತರಗತಿಯ ಉತ್ತೀರ್ಣ ಪ್ರಮಾಣ ಪತ್ರದ ದೃಢೀಕೃತ ಜೆರಾಕ್ಸ್ ಪ್ರತಿ, ವರ್ಗಾವಣೆ ಪತ್ರದ ದೃಢೀಕೃತ ಜೆರಾಕ್ಸ್ ಪ್ರತಿ, ವಾಸಸ್ಥಳದ ದೃಢೀಕರಣ ಪತ್ರ ಮತ್ತು ಭರ್ತಿ ಮಾಡಿ ದೃಢೀಕರಿಸಿದ

ಅನುಬಂಧ ಮತ್ತು ಆಯ್ಕೆ ಮಾಡಿಕೊಂಡ ಭಾಷಾ ಮತ್ತು ಐಚ್ಛಿಕ ವಿಷಯಗಳ ಬಗ್ಗೆ ಪಡೆದ ದೃಢೀಕರಿಸಿದ ಮುಚ್ಚಳಿಕೆ ಪತ್ರ.

3. ಶುಲ್ಕ ಪಾವತಿಸಿರುವ ಮೂಲ ಚಲನ್ ಹಾಗೂ ಶುಲ್ಕ ಪಾವತಿಸಿದ ಎಲ್ಲಾ ವಿವರಗಳ FEE Statement
4. ದೃಢೀಕೃತ ಆಧಾರ್ ಕಾರ್ಡ್‌ನ ಪ್ರತಿ.
5. ಅರ್ಜಿ ನಮೂನೆಗಳು ಹಾಗೂ ದಾಖಲಾತಿ ಜೆರಾಕ್ಸ್ ಪ್ರತಿಗಳನ್ನು ಬೇರೆ ಬೇರೆಯಾಗಿ ವಿಂಗಡಿಸಿ, ಪ್ರತ್ಯೇಕ ಕಟ್ಟುಗಳನ್ನು ಮಾಡುವುದು.
6. ಅರ್ಜಿ ನಮೂನೆಗಳಿಗೆ ನೀಡಲಾಗುವ ಕ್ರಮ ಸಂಖ್ಯೆಯನ್ನೇ ಜೆರಾಕ್ಸ್ ಪ್ರತಿಗಳಿಗೆ ನೀಡಿ ಜೆರಾಕ್ಸ್ ದಾಖಲೆ ಹಾಗೂ FEE Statement ಮತ್ತು ಶುಲ್ಕ ಪಾವತಿಸಿದ ಚಲನ್‌ನನ್ನು ಒಂದೇ ಲಕೋಟೆಯಲ್ಲಿಡುವುದು. ಅರ್ಜಿ ನಮೂನೆಗಳನ್ನು ಮಾತ್ರ ಪಾಲಿಥಿನ್ ಕವರ್‌ನಲ್ಲಿರಿಸುವುದು.
7. ಕಾಲೇಜಿನಲ್ಲಿ ಖಾಸಗಿ ಅಭ್ಯರ್ಥಿಗಳ ನೊಂದಣಿ ಇಲ್ಲದಿದ್ದಲ್ಲಿ ಕಡ್ಡಾಯವಾಗಿ "ಶೂನ್ಯ ವರದಿ" ಯನ್ನು (Nil Report) ಕಳುಹಿಸುವುದು.
8. ಅಭ್ಯರ್ಥಿಗಳಿಂದ ಪಡೆದ ಇನ್ನುಳಿದ ದಾಖಲೆಗಳನ್ನು ಕಾಲೇಜಿನಲ್ಲಿಯೇ ಕಾಯ್ದಿರಿಸುವುದು.
9. ಅರ್ಜಿ ನಮೂನೆಗಳು ಹಾಗೂ ಮೇಲೆ ತಿಳಿಸಿರುವ ದಾಖಲೆಗಳನ್ನು ಬಂಡಲ್ ಮಾಡಿ ಲಕೋಟೆಯ ಮೇಲೆ ಕಾಲೇಜಿನ ಸಂಕೇತ ಸಂಖ್ಯೆ ಮತ್ತು ವಿಳಾಸದೊಂದಿಗೆ "ಖಾಸಗಿ ಅಭ್ಯರ್ಥಿಗಳ ಅರ್ಜಿಗಳು" ಎಂದು ನಮೂದಿಸಿ ದಂಡಶುಲ್ಕ ರಹಿತ ಸಲ್ಲಿಕೆಯಾದ ಅರ್ಜಿಗಳನ್ನು ಬರೆದು ದಿನಾಂಕ: 03–11–2023 (ದಂಡ ಶುಲ್ಕವಿಲ್ಲದ ಅರ್ಜಿಗಳನ್ನು) ಮತ್ತು ದಂಡ ಶುಲ್ಕ ಸಹಿತ ಅರ್ಜಿಗಳನ್ನು ದಿನಾಂಕ:15–11–2023 ರಂದು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಸಲ್ಲಿಸುವುದು.
10. ಜಿಲ್ಲಾ ಉಪನಿರ್ದೇಶಕರು ಪ್ರಾಂಶುಪಾಲರಿಂದ ಸ್ವೀಕರಿಸಿದ " ಖಾಸಗಿ ಅಭ್ಯರ್ಥಿಗಳ ಅರ್ಜಿಗಳು" ದಿನಾಂಕ 17–11–2023 ರಂದು ಮಂಡಲಿಗೆ ಸಲ್ಲಿಸಬೇಕು.

**ವಿಶೇಷ ಸೂಚನೆ:–**

ಕಾಲೇಜಿನಲ್ಲಿ ಖಾಸಗಿ ಅಭ್ಯರ್ಥಿಗಳಾಗಿ ನೊಂದಾಯಿಸಿಕೊಂಡ ಪ್ರತಿಯೊಬ್ಬ ಅಭ್ಯರ್ಥಿಯ ಮಾಹಿತಿಯನ್ನು ಮಂಡಲಿಯು ನಿಗದಿಪಡಿಸಿದ ಖಾಸಗಿ ಅಭ್ಯರ್ಥಿಗಳ ಆನ್‌ಲೈನ್ ಪೋರ್ಟಲ್‌ನಲ್ಲಿ ಭರ್ತಿ ಮಾಡಿ ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿರುತ್ತದೆ. ನಿಯಮಾನುಸಾರ ದಾಖಲೆಗಳನ್ನು ಸಲ್ಲಿಸುವುದರ ಜೊತೆಗೆ ಅಪ್‌ಲೋಡ್ ಮಾಡಿದ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ಪತ್ರಗಳನ್ನು ನೀಡಲಾಗುವುದು.

ಮಧ್ಯವರ್ತಿಗಳ ಮೂಲಕ ಖಾಸಗಿ ಅಭ್ಯರ್ಥಿಗಳ ಅರ್ಜಿಗಳನ್ನು ಸ್ವೀಕರಿಸಿ ನಿಯಮಗಳನ್ನು ಉಲ್ಲಂಘಿಸಿದ್ದು, ಕಂಡುಬಂದಲ್ಲಿ ಸಂಬಂಧಿಸಿದ ಪ್ರಾಂಶುಪಾಲರುಗಳ ವಿರುದ್ಧ ಸೂಕ್ತ ಶಿಸ್ತಿನ ಕ್ರಮ ಜರುಗಿಸಲಾಗುವುದು.

ಅಧ್ಯಕ್ಷರು,
ಕ.ಶಾ.ಪ&ಮೌ.ನಿ.ಮಂಡಲಿ.

ಸೂಕ್ತ ಕ್ರಮಕ್ಕಾಗಿ:–

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರುಗಳು, ಶಾಲಾ ಶಿಕ್ಷಣ ಇಲಾಖೆ, (ಪದವಿ ಪೂರ್ವ) ರವರಿಗೆ (ಒಂದು ಪ್ರತಿಯನ್ನು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸುವುದು)
2. ರಾಜ್ಯದ ಎಲ್ಲಾ ಶಾಲಾ ಶಿಕ್ಷಣ ಇಲಾಖೆಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ. (ಒಂದು ಪ್ರತಿಯನ್ನು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸುವುದು)
3. ಸಹಾಯಕ ನಿರ್ದೇಶಕರು, ಗಣಕ ಶಾಖೆ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, ಇವರಿಗೆ (ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು)

ಪ್ರತಿಯನ್ನು:–

1. ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, (ಪದವಿ ಪೂರ್ವ) 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–12 ರವರಿಗೆ.
2. ನಿರ್ದೇಶಕರು, (ಪರೀಕ್ಷೆ) ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–3.
3. ಹೆಚ್ಚುವರಿ/ಕಛೇರಿ ಪ್ರತಿ.

GOVERNMENT OF KARNATAKA

KARNATAKA SCHOOL EXAMINATION AND ASSESEMENT BOARD, BANGALORE-3

| PRIVATE CANDIDATES ONLY-2024 | | | |
|---|---|---|---|
| 1. COLLEGE CODE: | | 2. APPLICATION NUMBER: | |
| 3. CANDIDATE NAME: | | | |
| 4. FATHER'S NAME: | | | |
| 5.MOTHER'S NAME: | | | |
| 6. DATE OF BIRTH: | 7. SEX: | 8. RELIGION: | 18(a) CANDIDATE PHOTO |
| | | | |
| 9. QUALIFYING EXAMINATION | 10. SSLC REG.NO (AS PER SSLC MARKS CARD) | 11. YEAR AND MONTH OF PASSING X STD | |
| | | | |
| 12. CASTE CATEGORY (SC,ST,C-1,2A,2B, 3A,3B & OTHERS) | 13. PHYSICALLY CHALLENGED | 14. EXAM FEES PAID | |
| | | | |
| 15. MEDIUM | 16. SUBJECT COMBINATION | | 18(b). SIGNATURE OF THE CANDIDATE |
| | | | |
| 17(A) SUB CODE | 17(B) SUBJECT NAME | | |
| | | | 19. MOBILE NUMBER |
| | | | |
| | | | |
| | | | 20. EMAIL ID |
| | | | |
| | | | |
| SIGNATURE OF THE PRINCIPAL | | SIGNATURE OF THE PARENT/GUARDIAN | |

NOTE:PHYSICALLY CHALLENGED:

a. BLIND b. DEAF AND DUMB c. ORTHO d. DYSLEXIA

**ಕರ್ನಾಟಕ ಸರ್ಕಾರ**

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ, ಮಲ್ಲೇಶ್ವರಂ, ಬೆಂಗಳೂರು–03**

ಸಂಖ್ಯೆ : ಕಶಾಪ&ಮೌನಿಮಂ/ಪರೀಕ್ಷೆ/ಮು.ಪ/2023–24 ದಿನಾಂಕ:03–10–2023

**ಮುಚ್ಚಳಿಕೆ ಪತ್ರ**

ಅಭ್ಯರ್ಥಿ ............................................. ತಂದೆ .......................................... ಎಸ್‌ಎಸ್‌ಎಲ್‌ಸಿ ನೋಂದಣಿ ಸಂಖ್ಯೆ ................................................. ಆದ ನಾನು ಸರ್ಕಾರಿ ಪದವಿ ಪೂರ್ವ ಕಾಲೇಜು ............................................... ಮುಖಾಂತರ ಖಾಸಗಿ ಅಭ್ಯರ್ಥಿಯಾಗಿ ಮಾರ್ಚ್ 2024ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ–1ಕ್ಕೆ ನೋಂದಾಯಿಸಲು ಅರ್ಜಿ ಸಲ್ಲಿಸಿ, ಕೆಳಕಂಡ ಭಾಷಾ, ಐಚ್ಛಿಕ ವಿಷಯಗಳನ್ನು 2024 ರ ಪರೀಕ್ಷೆಗೆ ಆಯ್ಕೆ ಮಾಡಿಕೊಂಡಿರುತ್ತೇನೆ.

ಆಯ್ಕೆ ಮಾಡಿಕೊಂಡ ಭಾಷಾ ಮತ್ತು ಐಚ್ಛಿಕ ವಿಷಯಗಳು:

**ಭಾಷಾ ವಿಷಯಗಳು**

| ಕ್ರಮ ಸಂಖ್ಯೆ | ಭಾಷಾ ವಿಷಯಗಳು | ವಿಷಯ ಸಂಕೇತ |
|---|---|---|
| 01 | | |
| 02 | | |

**ಐಚ್ಛಿಕ ವಿಷಯಗಳು**

| ಕ್ರಮ ಸಂಖ್ಯೆ | ಭಾಷಾ ವಿಷಯಗಳು | ವಿಷಯ ಸಂಕೇತ |
|---|---|---|
| 01 | | |
| 02 | | |
| 03 | | |
| 04. | | |

ಮೇಲ್ಕಂಡ ಭಾಷಾ ವಿಷಯಗಳು ಮತ್ತು ಐಚ್ಛಿಕ ವಿಷಯಗಳು ನನ್ನ ಸ್ವ–ಇಚ್ಛೆಯಿಂದ ಮಾರ್ಚ್ 2024 ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಆಯ್ಕೆ ಮಾಡಿಕೊಂಡಿರುತ್ತೇನೆ.

ಸ್ಥಳ:

ದಿನಾಂಕ: ಖಾಸಗಿ ಅಭ್ಯರ್ಥಿಯ ಸಹಿ

ಸ್ಥಳ:

ದಿನಾಂಕ:

**ದೃಢೀಕರಿಸಿದೆ**

ಪ್ರಾಚಾರ್ಯರ ಸಹಿ

ಕಾಲೇಜಿನ ಮೊಹರು

**ವಿಶೇಷ ಸೂಚನೆ:–** ಮುಚ್ಚಳಿಕೆ ಪತ್ರ ಖಾಸಗಿ ಅಭ್ಯರ್ಥಿಯ ಕೈಬರಹದಲ್ಲಿರುವುದು ಕಡ್ಡಾಯ.

**ಕರ್ನಾಟಕ ಸರ್ಕಾರ**

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ, ಮಲ್ಲೇಶ್ವರಂ, ಬೆಂಗಳೂರು–03**

ಸಂಖ್ಯೆ : ಕಶಾಪ&ಮೌನಿಮಂ/ಪರೀಕ್ಷೆ/ಖಾ.ಅ.ಮಾ/2023–24 ದಿನಾಂಕ:03–10–2023

## ಅನುಬಂಧ

## ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ–1ಕ್ಕೆ ಖಾಸಗಿ ಅಭ್ಯರ್ಥಿಗಳ ಮಾಹಿತಿ ಒದಗಿಸುವ ನಮೂನೆ

ಅಭ್ಯರ್ಥಿ............................................................... ತಂದೆ .......................................... ಇವರು ನಮ್ಮ ಕಾಲೇಜಿನ ಮುಖಾಂತರ ಖಾಸಗಿ ಅಭ್ಯರ್ಥಿಯಾಗಿ 2024 ರ ಮಾರ್ಚ್ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ–1ಕ್ಕೆ ನೋಂದಾಯಿಸಲು ಅರ್ಜಿ ಸಲ್ಲಿಸಿರುತ್ತಾರೆ. ಇವರು 10ನೇ ತರಗತಿ ಪರೀಕ್ಷೆಯನ್ನು ನೋಂದಣಿ ಸಂಖ್ಯೆ........................ಮೂಲಕ.........................ವರ್ಷದಲ್ಲಿ.................................................................... ......................ಶಾಲೆ/ಕಾಲೇಜಿನಲ್ಲಿ ತೇರ್ಗಡೆಯಾಗಿರುತ್ತಾರೆ.

ಅಭ್ಯರ್ಥಿಯು 10ನೇ ತರಗತಿ ತೇರ್ಗಡೆಯಾಗಿದ್ದು, 10ನೇ ತರಗತಿ ಪಾಸಾದ ಶಾಲೆ/ಕಾಲೇಜಿನ ಮುಖ್ಯಸ್ಥರು ಅಭ್ಯರ್ಥಿಯ ಪೋಟೋ ದೃಢೀಕರಿಸಿದ್ದಾರೆ.

ಅಭ್ಯರ್ಥಿಯು ಪಿಯುಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದು, ಪಿಯುಸಿ ಓದಿದ ಕಾಲೇಜಿನ ಪ್ರಾಚಾರ್ಯರು ಅಭ್ಯರ್ಥಿಯ ಫೋಟೋ ದೃಢೀಕರಿಸಿದ್ದಾರೆ.

10ನೇ ತರಗತಿ ಮೂಲ ಅಂಕಪಟ್ಟಿ/ಜನ್ಮ ದಿನಾಂಕ ದೃಢೀಕರಣಕ್ಕಾಗಿ ಪಡೆದ ಮೂಲ ದಾಖಲೆಗಳನ್ನು ಕಾಲೇಜಿನಲ್ಲಿ ಉಳಿಸಿಕೊಂಡು, ಇವುಗಳ ದೃಢೀಕೃತ ಫೋಟೋ ಪ್ರತಿಗಳನ್ನು ಇದರೊಂದಿಗೆ ಕಳುಹಿಸಲಾಗಿದೆ.

ಅಭ್ಯರ್ಥಿಯು ಸಲ್ಲಿಸಿರುವ ದಾಖಲೆಗಳನ್ನು ನಾನು ಖುದ್ದಾಗಿ ಪರಿಶೀಲಿಸಿ ಎಲ್ಲಾ ದಾಖಲೆಗಳು ಅಸಲಿಯಾಗಿವೆ ಹಾಗೂ ಒದಗಿಸಿರುವ ಮಾಹಿತಿಗಳು ಇಲಾಖೆಯ ಅಧಿಸೂಚನೆಯ ಪ್ರಕಾರ ಸರಿಯಾಗಿವೆ ಎಂಬುದನ್ನು ಖಚಿತಪಡಿಸಿಕೊಂಡು, ಇವರು 2024 ರ ಮಾರ್ಚ್ ಪರೀಕ್ಷೆಗೆ ಖಾಸಗಿ ಅಭ್ಯರ್ಥಿಯಾಗಿ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಿದ್ದಾರೆ ಎಂಬುದಾಗಿ ದೃಢೀಕರಿಸಿರುತ್ತೇನೆ. ನಮ್ಮ ಕಾಲೇಜಿನ ಇಬ್ಬರು ಹಿರಿಯ ಉಪನ್ಯಾಸಕರು ಈ ದಾಖಲೆಗಳನ್ನು ಪರಿಶೀಲಿಸಿದ್ದಾರೆ.

**ದಾಖಲೆಗಳನ್ನು ಪರಿಶೀಲಿಸಿದ ಉಪನ್ಯಾಸಕರ ಹೆಸರು ಮತ್ತು ಸಹಿ:**

| ಕ್ರಮ ಸಂಖ್ಯೆ | ಹೆಸರು | ಸಹಿ |
|---|---|---|
| 01 | | |
| 02 | | |

ಸ್ಥಳ: ಪ್ರಾಚಾರ್ಯರ ಸಹಿ

ದಿನಾಂಕ: ಕಾಲೇಜಿನ ಮೊಹರು

**ಅಡಕಗಳು:**

1. 10 ನೇ ತರಗತಿ ಪಾಸಾದ ದೃಢೀಕೃತ ಅಂಕಪಟ್ಟಿ/ಪ್ರಮಾಣ ಪತ್ರ.
2. ಮೂಲ ವರ್ಗಾವಣೆ ಪತ್ರದ ದೃಢೀಕೃತ ಪ್ರತಿ.
3. ವಾಸಸ್ಥಳದ ದೃಢೀಕೃತ ಪತ್ರದ ದೃಢೀಕೃತ ಪ್ರತಿ.
4. ವಿದ್ಯಾರ್ಥಿಯು ಆಯ್ಕೆ ಮಾಡಿಕೊಂಡ ಭಾಷೆ ಮತ್ತು ಐಚ್ಛಿಕ ವಿಷಯಗಳ ಬಗ್ಗೆ ಕೈಬರಹದ ಮುಚ್ಚಳಿಕೆ ಪತ್ರ.

**ದ್ವಿಪ್ರತಿ ವರ್ಗಾವಣೆ ಪ್ರಮಾಣ ಪತ್ರ ಆಧಾರದ ಮೇಲೆ ಖಾಸಗಿ ಅಭ್ಯರ್ಥಿಯಾಗಿ ನೊಂದಾಯಿಸಲು ಸಲ್ಲಿಸಬೇಕಾದ ಅಫಿಡವಿಟ್ ಮಾಹಿತಿ**

1. ....................................................... ಆದ ನಾನು ............................................................................ ಶಾಲೆಯಲ್ಲಿ 10ನೇ ತರಗತಿ ವ್ಯಾಸಂಗ ಮಾಡಿ ಉತ್ತೀರ್ಣನಾಗಿದ್ದು, ಸದರಿ ಪ್ರೌಢಶಾಲೆಯಿಂದ ನನ್ನ ಮೂಲ ವರ್ಗಾವಣೆ ಪ್ರಮಾಣ ಪತ್ರವನ್ನು ಮತ್ತು ಅಂಕಪಟ್ಟಿಯನ್ನು ಪಡೆದುಕೊಂಡಿರುತ್ತೇನೆ.

2. ನಾನು 10ನೇ ತರಗತಿ ಉತ್ತೀರ್ಣಗೊಂಡ ನಂತರ ಎಸ್‌ಎಸ್‌ಎಲ್‌ಸಿ ಮೂಲ ವರ್ಗಾವಣೆ ಪತ್ರವನ್ನು ನೀಡಿ ಎಲ್ಲಿಯೂ ಯಾವ ಕೋರ್ಸಿಗೂ ಸಹ ದಾಖಲಾತಿ ಹೊಂದಿರುವುದಿಲ್ಲ.

3. ನನ್ನ ಮೂಲ ವರ್ಗಾವಣೆ ಪತ್ರವು ...................................................ರಲ್ಲಿ ಕಳೆದು ಹೋಗಿದ್ದು, ಈ ಹಿನ್ನೆಲೆಯಲ್ಲಿ ನಮ್ಮ ವ್ಯಾಪ್ತಿಗೆ ಬರುವಂತಹ ಪೋಲಿಸ್ ಠಾಣೆಗೆ ದಿನಾಂಕ..........................ರಂದು FIR ದಾಖಲಿಸಿರುತ್ತೇನೆ. FIR ಸಂಖ್ಯೆ ..........................................ಇದಾಗಿರುತ್ತದೆ.

4. ನನ್ನ ಮೂಲ ವರ್ಗಾವಣೆ ಪತ್ರವು ಸಿಕ್ಕಿದ್ದೇ ಆದಲ್ಲಿ ಅದನ್ನು ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರಿಗೆ ತಂದು ನೀಡುತ್ತೇನೆ.

5. ನಾನು ವ್ಯಾಸಂಗ ಮಾಡಿದ ಶಾಲೆಯಲ್ಲಿ ಮೊದಲು ಮೂಲ ವರ್ಗಾವಣೆ ಪತ್ರವು ದಿನಾಂಕ:................ ರಲ್ಲಿ ಪಡೆದಿರುತ್ತೇನೆ. ತದನಂತರ ಅದು ಕಳೆದುಹೋದ ನಂತರ ದ್ವಿಪ್ರತಿ ಮೂಲ ವರ್ಗಾವಣೆ ಪತ್ರವನ್ನು ದಿನಾಂಕ:............................... ರಂದು ಪಡೆದುಕೊಂಡಿರುತ್ತೇನೆ.

6. ವರ್ಗಾವಣೆ ಪ್ರಮಾಣ ಪತ್ರ ದುರ್ಬಳಕೆ ಮಾಡಿರುವುದು ಸಾಬೀತಾದಲ್ಲಿ ಬೇರೆ ಯಾವುದಾದರೂ ಶೈಕ್ಷಣಿಕ ಸಂಸ್ಥೆಗಳಲ್ಲಿ ಬಳಕೆ ಮಾಡಿರುವುದು ಮುಂದಿನ ದಿನಗಳಲ್ಲಿ ಕಂಡುಬಂದಲ್ಲಿ ನನ್ನ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಬಹುದಾಗಿದೆ ಎಂಬ ಮಾಹಿತಿಯು ನನ್ನ ಗಮನದಲ್ಲಿದೆ ಎಂದು ನಾನು ಪ್ರಮಾಣ ಮಾಡುತ್ತೇನೆ.

7. ನಾನು ನೀಡಿದ ಮಾಹಿತಿಗಳು ಎಲ್ಲಾ ಸರಿ ಇರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ. ಇದರಲ್ಲಿ ಯಾವುದೇ ಮಾಹಿತಿ ಸುಳ್ಳು ಎಂದು ರುಜುವಾತಾದಲ್ಲಿ ಇಲಾಖೆ ನೀಡುವ ಕ್ರಮಕ್ಕೆ ನಾನು ಬದ್ಧನಾಗಿರುತ್ತೇನೆ ಹಾಗೂ ಖಾಸಗಿ ಅಭ್ಯರ್ಥಿಯಾಗಿ ನೊಂದಾಯಿಸಿದ ಅರ್ಜಿಯನ್ನು ಇಲಾಖೆ ರದ್ದುಪಡಿಸಿದಲ್ಲಿ ಅದಕ್ಕೆ ಸ್ವತಃ ನಾನೇ ಜವಾಬ್ದಾರನಾಗಿರುತ್ತೇನೆ.

ವಿದ್ಯಾರ್ಥಿಯ ಸಹಿ                    ಪೋಷಕರ ಸಹಿ

ದೃಢೀಕರಿಸಿದೆ
ಪ್ರಾಂಶುಪಾಲರು ಸಹಿ ಮೊಹರಿನೊಂದಿಗೆ

GOVERNMENT OF KARNATAKA

KARNATAKA SCHOOL EXAMINATION AND ASSESEMENT BOARD, BANGALORE-3

FEE STATEMENT (FOR PRIVATE CANDIDATES)

II PUC ANNUAL EXAMINATION-1 MARCH 2024

Name of the College College Code: College Seal

| 1 | 2 | 3 | 4 | 5 | | 6 | | 7 | | | | 8 | 9 | 10 | 11 | 12 | 13 | 14 | 15 | 16 | 17 | 18 |
|---|---|---|---|---|---|---|---|---|---|---|---|---|---|---|---|---|---|---|---|---|---|---|
| Appl.n No. | Name | Fathers Name | SSLC Reg. No. | Subject Code | | Combination | | Category | | | | Date of Exam Fee paid | Reg. Fees | Admn Fees | CBC Fees | MC Fees | Exam Fees | Late Fees | Spl. Late Fees | Total Amount | Challan No. & date | Remarks |
| | | | | Languages | OptionaLs | Arts | commerce | SC | ST | C1 | oTHERS | | | | | | | | | | | |
| | | | | | | | | | | | | | | | | | | | | | | |

Date:

Place:

Signature of the Principal with seal.

ಕರ್ನಾಟಕ ಸರ್ಕಾರ

## ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ, ಮಲ್ಲೇಶ್ವರಂ, ಬೆಂಗಳೂರು–03

## ಕ್ರೋಢೀಕೃತ ಪಟ್ಟಿ

II nd PUC ANNUAL Examination-1 March 2024

| Sl. No. | College Name | College Code | Principal Name & Mob No. | Applications Sl. No. | | Total Appli cation | Total Fees | | Remarks |
|---|---|---|---|---|---|---|---|---|---|
| | | | | From | To | | With Fine | With out Fine | |
| 1 | | | | | | | | | |
| 2 | | | | | | | | | |
| 3 | | | | | | | | | |
| 4 | | | | | | | | | |
| 5 | | | | | | | | | |
| 6 | | | | | | | | | |
| 7 | | | | | | | | | |

ಜಿಲ್ಲಾ ಉಪನಿರ್ದೇಶಕರುಗಳು ತಮ್ಮ ಜಿಲ್ಲೆಯ ಒಟ್ಟು ಅರ್ಜಿಗಳನ್ನು ದಿನಾಂಕ:03–11–2023 ರಂದು ಮಂಡಲಿಯ ಪದವಿ ಪೂರ್ವ ಪರೀಕ್ಷಾ ವಿಭಾಗಕ್ಕೆ ಜಿಲ್ಲೆಯ ಎಲ್ಲಾ ಕಾಲೇಜುಗಳ ದಂಡ ಶುಲ್ಕ ರಹಿತ ಹಾಗೂ ದಂಡ ಶುಲ್ಕ ಸಹಿತ ಅರ್ಜಿಗಳನ್ನು ಕ್ರೋಢೀಕರಿಸಿದ ಪಟ್ಟಿಯೊಂದಿಗೆ ಸಲ್ಲಿಸಲಾಗಿದೆ.

ಸ್ವೀಕರಿಸುವವರ ಸಹಿ ಹಾಗೂ ಹೆಸರು
ಕ.ಶಾ.ಪ.&ಮೌ.ನಿ.ಮಂ.

1. Total Applications:
2. Total No. of Bundles:

ಜಿಲ್ಲಾ ಉಪನಿರ್ದೇಶಕರು
ಶಾಲಾ ಶಿಕ್ಷಣ ಇಲಾಖೆ
(ಪದವಿ ಪೂರ್ವ)
____________ ಜಿಲ್ಲೆ.